**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.899/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಸುಂದರೇಶ್.ವಿ.ಎನ್ | ಪ್ರಾಸಾ-2 |
| ತಂದೆಯ ಹೆಸರು | : ನಿರ್ವಾಣೇಗೌಡ | ಚಾಸಾ-2 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೃಷಿ | ದಿನಾಂಕಃ 23.05.2025 |
| ವಾಸಸ್ಥಳ | : ವಾಜುವಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ನನಗಿದೆ. ಚಾಸಾ-1 ನನ್ನ ಸಹೋದರಿ. ಚಾಸಾ-3 ನನ್ನ ಪತ್ನಿ. ಚಾಸಾ-4 ಮತ್ತು 5 ರವರ ಪರಿಚಯ ನನಗಿದೆ.

ದಿ.17.01.2022 ರಂದು ಚಿಕ್ಕಮಗಳೂರು ತಾಲ್ಲೂಕಿನ ವಾಜುವಳ್ಳಿಯಲ್ಲಿ ನಮ್ಮ ಮನೆಯಲ್ಲಿರುವಾಗ ಬೆ.9.30 ರಿಂದ 9.45 ರ ಸಮಯದಲ್ಲಿ ಚಾಸಾ-1 ರವರು ನನಗೆ ದೂರವಾಣಿ ಕರೆಯನ್ನು ಮಾಡಿ, ಅವರಿಗೆ ಸೇರಿದ ಸ.ನಂ.40 ರ 6 ಎಕರೆ 23 ಗುಂಟೆ ಜಮೀನಿನಲ್ಲಿ ಚಾಸಾ-1 ರವರು ಕಾಫೀಯನ್ನು ಹೆರಕಲು ಮಾಡಲು ಹೋದ ಸಮಯದಲ್ಲಿ ಆರೋಪಿತರುಗಳು ಸದರಿ ಜಮೀನಿಗೆ ಹಾಕಲಾದ ತಂತಿ ಬೇಲಿಯನ್ನು ಕೀಳುತ್ತಿರುವುದು ಕಂಡು ಬರುತ್ತದೆ. ನಂತರ ಚಾಸಾ-1 ರವರು ನಮ್ಮ ತೋಟದ ಬೇಲಿಯನ್ನು ಏಕೆ ಕೀಳುತ್ತಿದ್ದೀರಿ ಎಂದು ಆರೋಪಿತರುಗಳನ್ನು ಕೇಳಿದಾಗ, ಆರೋಪಿತರುಗಳಲ್ಲಿ ಒಬ್ಬರಾದ 1 ನೇ ಆರೋಪಿಯು ಕತ್ತಿಯಿಂದ ಚಾಸಾ-1 ರವರ ಎಡಗೈ ಗೆ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿಯು ಚಾಸಾ-1 ರವರನ್ನು ಅವರ ಕೈನಿಂದ ತಳ್ಳಿರುತ್ತಾರೆ ಮತ್ತು ತಲೆಕೂದಲನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ 3 ಮತ್ತು 4 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ನಿಂದಿಸಿ ಅವರ ಕೈ ನಿಂದ ಚಾಸಾ-1 ರವರಿಗೆ ಥಳಿಸಿರುತ್ತಾರೆ. ನಂತರ 1 ನೇ ಆರೋಪಿಯು ಬಂದೂಕನ್ನು ತೋರಿಸಿ ನನ್ನ ಬಳಿ ಪರವಾನಿಗೆ ಇದೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ನಿನ್ನ ಪ್ರಾಣ ತೆಗೆಯುತ್ತೇನೆ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ಚಾಸಾ-1 ರವರ ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ ಕಾರಣ 10.30 ರ ಸಮಯಕ್ಕೆ ಚಾಸಾ-1 ರವರ ಮನೆಗೆ ಬಂದಿರುತ್ತೇನೆ.

ನಂತರ ನಾನು ನೋಡಲಾಗಿ ಚಾಸಾ-1 ರವರ ಕೈನಿಂದ ರಕ್ತ ಸ್ರಾವವಾಗುತ್ತಿರುತ್ತದೆ ಅವರು ನೈಟಿ ಹರಿದಿರುತ್ತದೆ. ಅಲ್ಲಿಂದ ಚಿಕ್ಕಮಗಳೂರಿನ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಪೋಲಿಸರಿಗೆ ದೂರು ನೀಡಿದ ವಿಚಾರವು ನನಗೆ ತಿಳಿದಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.899/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಸುಮಂತ್ | ಪ್ರಾಸಾ-3 |
| ತಂದೆಯ ಹೆಸರು | : ಚಂದ್ರೇಗೌಡ | ಚಾಸಾ-4 |
| ವಯಸ್ಸು | : 46 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೃಷಿ | ದಿನಾಂಕಃ23.05.2025 |
| ವಾಸಸ್ಥಳ | : ಬಕ್ಕಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ನನಗಿದೆ. ಚಾಸಾ-5 ರವರ ನಮ್ಮ ಊರು ಮನೆಯವರು.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ.

ದಿ.29.01.2022 ರಂದು ನಾನು ಕಾಫೀ ತೋಟದಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಬಣಕಲ್ ಠಾಣೆಯ ಪೋಲಿಸರು ಸ್ಥಳ ಮಹಜರ್ ಗೆಂದು ಕರೆಯಲಾಗಿ, ಸದರಿ ದಿನ ಪೋಲಿಸರು ನಿಪಿ-2 ನ್ನು ಬರೆದು, ಎಂ.ಒ.1 ರಿಂದ 4 ನ್ನು ಅಮಾನತುಪಡಿಸಿಕೊಂಡಿರುತ್ತಾರೆ. ನಿಪಿ-2 ನ್ನು ಮ.3.00 ರಿಂದ 4.00 ರ ಸಮಯದಲ್ಲಿ ಬರೆಯಲಾಗಿರುತ್ತದೆ. ನಾನು ಮತ್ತು ಚಾಸಾ-5 ರವರು ನಿಪಿ-2 ಕ್ಕೆ ಸಹಿ ಮಾಡಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ,</u>**
**<u>ಮೂಡಿಗೆರೆ</u>**
**<u>ಸಿ.ಸಿ.899/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂತೋಷ್ | ಪ್ರಾಸಾ -4 |
| ತಂದೆಯ ಹೆಸರು | : ಬಿಳಿಯಪ್ಪಗೌಡ | ಚಾಸಾ-5 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೃಷಿ | ದಿನಾಂಕಃ 23.05.2025 |
| ವಾಸಸ್ಥಳ | : ಬಕ್ಕಿ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ನನಗಿದೆ. ಚಾಸಾ-1 ಮತ್ತು 4 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ.

ದಿ.29.01.2022 ರಂದು ನಾನು ಕಾಫೀ ತೋಟದಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಬಣಕಲ್ ಠಾಣೆಯ ಪೋಲಿಸರು ಬಕ್ಕಿ ಗ್ರಾಮದ ಸ.ನಂ.40 ರ ಸ್ಥಳ ಮಹಜರ್ ಗೆಂದು ಕರೆಯಲಾಗಿ, ನಾನು ಹಾಜರಾಗಿರುತ್ತೇನೆ. ಸದರಿ ದಿನ ಪೋಲಿಸರು ಇಲ್ಲಿ ಕೇವಲ ಸ್ಥಳ ಮಹಜರ್ ಮಾಡಲಾಗುತ್ತದೆ ನಿಮಗೆ ಯಾವುದೇ ತೊಂದರೆ ಯಾಗುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ಕತ್ತಿ, ಒಂದು ನೈಟಿ, ಒಂದು ಶರ್ಟ್, ಒಂದು ತಲೆ ಬಟ್ಟೆಯನ್ನು ಹಾಜರು ಮಾಡಿದ ಮೇರೆಗೆ ಅದನ್ನು ಪೋಲಿಸರು ಅಮಾನತುಪಡಿಸಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ಒಂದು ಫೋಟೋವನ್ನು ತೆಗೆಯಲಾಗಿರುತ್ತದೆ. ಈಗಾಗಲೇ ನಿಪಿ-3 ರಿಂದ 5 ಎಂದು ಗುರುತಿಸಲಾಗಿರುತ್ತದೆ. ಆಗ ಸಮಯ ಮ.3.00 ರಿಂದ 4.00 ರ ಸಮಯವಾಗಿರುತ್ತದೆ. ಸದರಿ ಸಮಯದಲ್ಲಿ ಚಾಸಾ-1, 4 ಮತ್ತು ಪುಟ್ಟಸ್ವಾಮಿಯವರು ಹಾಜರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.